
ಪದಬಂಧ



**ಎಡದಿಂದ ಬಲಕ್ಕೆ**

1. ಅವನ ವಾಚಿನ ಸೌಂದರ್ಯ ಕಂಡು ಮಾತೇ ಇಲ್ಲವಾಯಿತು 4
3. ನೀರಿನಲ್ಲಿ ಅದ್ದಿ ತೆಗೆದ ವಸ್ತ್ರ ಧರಿಸಿದ್ದಕ್ಕೆ ಹೀಗೆ ನಡುಕ 3
4. ವರ್ಣಿಸುವ ಕೆಲಸ ಬೇಕಿಲ್ಲ; ಅವನೊಬ್ಬ ವ್ಯಾಪಾರಿ 3
6. ನಿಯಮಕ್ಕೆ ತಕ್ಕಂತೆ ವಸ್ತುಗಳ ಅದಲಾಬದಲಿ 4
7. ಮೂರು ಪೀಠಗಳ ಮೇಲೆ ಬೌದ್ಧರ ಮೂರು ಧರ್ಮ ಗ್ರಂಥಗಳು 4
9. ವ್ಯಾಯಾಮ ಕಲಿಯಲು ಹೋದವ ತಲುಪಿದ್ದು ಮೃತ್ಯು ದೇವತೆಯ ಪ್ರಪಂಚ 4
12. ಸದಾ ಕಾಡುವ ಅಪಾಯದಿಂದ ತಪ್ಪಿಸಿಕೊಳ್ಳಲು ಒಂದೊಳ್ಳೇ ತಂತ್ರ 4
14. ನದಿ ನೀರಿನ ವಿನಿಮಯದ ಕ್ರಮವೇ ಹಿಂದುಮುಂದಾಯಿತೇ? 3
15. ಅಲ್ಲಿ ಕಾಸಿಲ್ಲದ ಕೆಲಸಗಳೇ ಎಲ್ಲವೂ 3
16. ಹೂ ಎಸಳಿನ ಒಡೆಯನೆಂದರೆ ಸೇನಾಪತಿಯಾದಾನೇ? 4

**ಮೇಲಿನಿಂದ ಕೆಳಕ್ಕೆ**

1. ನೀರಿಗೂ ಅಲ್ಲಿ ರೂಪಾಯಿ ಖರ್ಚು ಮಾಡದೆ ಬೇರೆ ದಾರಿಯೇ ಇಲ್ಲ 4
2. ಆಕೆಯ ತವರಿನಲ್ಲಿ ವೈಭವದೊಡನೆ ನಡೆಯುವ ಒಂಬತ್ತು ದಿನಗಳ ಹಬ್ಬ 4
3. ಎಲ್ಲರ ಬದುಕಿಗೂ ಅನಿವಾರ್ಯ ಈ ಭೂಮಿ 3
5. ಕಾಳುಗಳ ಮಾರಾಟದಲ್ಲಿ ಏನೋ ಕದ್ದು ಮುಚ್ಚುವ ಕೆಲಸ ನಡೆದಿದೆ 3
6. ವೈಷಮ್ಯ ತುಂಬಿಕೊಂಡಿರುವ ಜನರ ಮನದಲ್ಲೂ ಪ್ರಾಣಹಾರಕ ವಸ್ತುವೇ ತುಂಬಿದೆ 4
8. ಕಮ್ಮಿ ಏನಿದೆ ಅಲ್ಲಿ ? ಎಲ್ಲವೂ ಸುಂದರ, ಮನೋಹರ 4
10. ಮಂದ ಬುದ್ಧಿಯವನೆಂದು ತಿಳಿದೂ ಹೀಗೆ ಬಡಿದುಹಾಕಿದರೇ? 3
11. ಇಂಥ ಸುಂದರ ಕುಲಾವಿಯನ್ನು ಹೊಲಿದವನೂ ಲಲಿತ ವಿದ್ಯೆ ಬಲ್ಲವನೇ ತಾನೇ? 4
12. ಸುಂದರ ಸರಸ್ಸಿನ ತೀರದಲ್ಲಿ ವಿದ್ಯಾಧಿದೇವತೆ 4
13. ಪತ್ತೆಯಾಗಿಲ್ಲ ಇನ್ನೂ ಯಾವುದೂ ಭೂ ತಲದ ಲೋಕ 3

## 24—04—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಶುಭೋದಯ 3. ಕಥನ 4. ವಲ್ಮೀಕ 6. ಕಳ್ಳಧನ 7. ಅಂಕಿತ 9. ಕಂದುಕ 11. ನಗದು 13. ವಸತಿ 15. ಅಂಗಾರಕ 17. ನಸೀಬು 18. ವರ್ತನೆ 19. ಜಡತನ

**ಮೇಲಿನಿಂದ ಕೆಳಕ್ಕೆ**

1. ಶುನಕ 2. ಯವನ 3. ಕಟಕಿ 5. ಕರಿದು 7. ಅಂತರ್ಧಾನ 8. ತರದೂದು 9. ಕಂಠೀರವ 10. ಕರಾಮತಿ 12. ಗಹನ 14. ಸಹನೆ 15. ಅಂಬುಜ 16. ಕವನ


ಪ್ರಶ್ನಾಂಕಣ

# ಸಾಗರ ಜೀವಿ ಗಣತಿ: ಹೊಸದೇನು ಪ್ರಗತಿ?

ಪಾರಾವಾರ ಪೃಥ್ವಿಯ ಮೇಲ್ಮೈನ ಶೇಕಡ 71ರಷ್ಟು ಪ್ರದೇಶವನ್ನು ಆವರಿಸಿರುವ ಈ ಕ್ಷಾರ ಜಲಾವಾರ ಧರೆಯ ಅತ್ಯಂತ ವಿಶಾಲ ಜೀವಾವಾರ ಕೂಡ, ಹೌದಲ್ಲ? ಕಡಲಿನಲ್ಲಿ ಮೇಲ್ಮೈಯಿಂದ ತಳದವರೆಗೆ ಹೇರಳ ಸಂಖ್ಯೆಯ ಜೀವಿಗಳು (ಪ್ರಾಣಿಗಳು ಮತ್ತು ಸಸ್ಯಗಳು) ಕಿಕ್ಕಿರಿದಿವೆ. ಈವರೆಗೆ ಗುರುತಿಸಿ ಹೆಸರಿಸಿರುವಂತೆ ಸಾಗರಾವಾರದಲ್ಲಿ ಎರಡೂವರೆ ಲಕ್ಷಕ್ಕೂ ಅಧಿಕ ಜೀವಿ ಪ್ರಭೇದಗಳು ನೆಲೆಗೊಂಡಿವೆ! ಈ ಕುರಿತ ಸ್ಪಷ್ಟ ವಿವರಗಳು ಬೇಕೆಂದರೆ ಸಾಗರಗಳಲ್ಲಿರುವ ಸ್ತನಿ ಪ್ರಭೇದಗಳು 130 (ಚಿತ್ರ 1); ಮತ್ಸ್ಯ ಪ್ರಭೇದಗಳು 20,000 (ಚಿತ್ರ 3); ಸರೀಸೃಪ ಪ್ರಭೇದಗಳು 100 (ಚಿತ್ರ 2); ಚಿಪ್ಪಿನ ಜೀವಿ ಪ್ರಭೇದಗಳು 70,000; ಮೃದ್ವಂಗಿ ಪ್ರಭೇದಗಳು 46,000; ಸ್ಪೈಡೇರಿಯನ್‌ಗಳು 9000; ಕಂಟಕ ಚರ್ಮಿಗಳು 7000; ಅತ್ಯಂತ ಸೂಕ್ಷ್ಮ ಗಾತ್ರದ ಶರೀರದ ಪ್ರಾಣಿಗಳು ಮತ್ತು ಸಸ್ಯಗಳಾದ ಪ್ಲಾಂಕ್ಟನ್ ಪ್ರಭೇದಗಳು 1,07,000; ಶೈವಲ ಪ್ರಭೇದಗಳು 27,000; ಕಡಲ ಹುಲ್ಲುಗಳು 72; ಕಡಲ ಕಳೆ ಪ್ರಭೇದಗಳು 12,000!

ಸ್ಪಷ್ಟವಾಗಿಯೇ ಕಡಲಿನಲ್ಲಿರುವ ಜೀವಿ ಪ್ರಭೇದಗಳು ಇಷ್ಟೇ ಏನಲ್ಲ. ಜೀವ ವಿಜ್ಞಾನಿಗಳು ಊಹಿಸಿರುವಂತೆ ಸಾಗರಾವಾರದಲ್ಲಿ ಕನಿಷ್ಠ ಎರಡು ದಶಲಕ್ಷ ಜೀವಿ ಪ್ರಭೇದಗಳು ನೆಲೆಸಿವೆ. ಹಾಗೆಂದರೆ ಈವರೆಗೆ ತಿಳಿದಿರುವ ಪ್ರಭೇದಗಳಿಗಿಂತ ಇನ್ನೂ ಅಜ್ಞಾತವಾಗಿರುವ ಪ್ರಭೇದಗಳೇ ಹೆಚ್ಚು ಎಂಬುದು ಸ್ಪಷ್ಟ ತಾನೇ? ಅಂಥವನ್ನೆಲ್ಲ ಪತ್ತೆ ಹಚ್ಚುವುದು ಬಹು ಮಹತ್ವದ ಒಂದು ವೈಜ್ಞಾನಿಕ ಕೆಲಸವೇ ಹೌದಲ್ಲ?

ಅದಕ್ಕಾಗಿಯೇ ಜಪಾನ್ ದೇಶದ ಸುಪ್ರಸಿದ್ಧ ನಿಪ್ಪಾನ್ ಫೌಂಡೇಶನ್‌ನ ಆರ್ಥಿಕ ನೆರವಿನೊಡನೆ ನೆಕ್ಟನ್ ಓಷನ್ ಸೆನ್ಸಸ್ ಎಂಬೊಂದು ಗಣತಿ ಕಾರ್ಯಕ್ರಮ ಏಪ್ರಿಲ್ 2023ರಲ್ಲಿ ರೂಪುಗೊಂಡಿದೆ. ಹೇರಳ ಸಂಖ್ಯೆಯ ಪ್ರತಿಷ್ಠಿತ ಜೀವ ವಿಜ್ಞಾನಿಗಳ, ಅನ್ವೇಷಕರ, ಸಂಶೋಧಕರ ಅಂತರ ರಾಷ್ಟ್ರೀಯ ಸಹಯೋಗದಲ್ಲಿ ಸಾಗರಾವಾರದ ಅಜ್ಞಾತ ಜೀವಿ ಪ್ರಭೇದಗಳ ಶೋಧ ಮತ್ತು ವರ್ಗೀಕರಣದ ಕಾರ್ಯಯೋಜನೆಯನ್ನು ಕೈಗೊಳ್ಳಲಾಗಿದೆ. ಸುಮಾರು ಒಂದು ಶತಕೋಟಿ ಡಾಲರ್ ವೆಚ್ಚ ತಗಲಬಹುದಾದ ಈ ಯೋಜನೆ ಹತ್ತು ವರ್ಷಗಳಲ್ಲಿ ಕನಿಷ್ಠ ಒಂದು ಲಕ್ಷ ಹೊಸ ಪ್ರಭೇದಗಳನ್ನು ಪತ್ತೆಮಾಡುವ ಗುರಿಯನ್ನು ಹೊಂದಿದೆ.




ಅದಕ್ಕಾಗಿ ಕಳೆದ ವರ್ಷ ತಜ್ಞ ಡೈವರ್‌ಗಳನ್ನು (ಮುಳುಗುಕಾರರನ್ನು), ಜಲಾಂತರ್ಗಾಮಿಗಳನ್ನು ಮತ್ತು ದೂರ ನಿಯಂತ್ರಿತ ವಾಹನಗಳನ್ನು ಬಳಸಿ ಸಾಗರಾವಾರದ ಕೆಲವಾರು ಪ್ರದೇಶಗಳಲ್ಲಿ 4990 ಮೀಟರ್ ಆಳದವರೆಗೆ ಹತ್ತು ಸಾಗರಾನ್ವೇಷಣೆಗಳನ್ನು ನಡೆಸಲಾಯಿತು. ತತ್ಪರಿಣಾಮವಾಗಿ ಈವರೆಗೆ ತಿಳಿಯದಿದ್ದ 850 ಹೊಸ ಪ್ರಭೇದಗಳನ್ನು ಪತ್ತೆ ಹಚ್ಚಲಾಯಿತು. ಬರುವ ವರ್ಷಗಳಲ್ಲೂ ಇದೇ ರೀತಿಯ ಅನ್ವೇಷಣಾ ಕಾರ್ಯಗಳು ಮುಂದುವರೆಯಲಿವೆ.

■ ಎನ್. ವಾಸುದೇವ್